2847

**ಕರ್ನಾಟಕ ಸರ್ಕಾರ**

**ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಇವರು ಹೊರಡಿಸಿರುವ ನಡವಳಿಗಳು**

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ದಿನಾಂಕ: 09-02-2017ರ ತೀರ್ಪಿನ ಹಿನ್ನೆಲೆಯಲ್ಲಿ ವಾಹನ ಚಾಲಕರು/ಹಿರಿಯ ವಾಹನ ಚಾಲಕರು ವೃಂದದ ನೌಕರರ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:

1 ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾನಿಯಮ-1), ಸಿಆಸುಇ/ 182/ ಸೇನೆನಿ/2011,ದಿನಾಂಕ: 06.05.2017.

2. ಗ್ರೂಪ್ "ಡಿ" ವೃಂದದಿಂದ ವಾಹನ ಚಾಲಕರು ವೃಂದಕ್ಕೆ ಮುಂಬಡ್ತಿ, ವಾಹನ ಚಾಲಕರು ವೃಂದದಿಂದ ಹಿರಿಯ ವಾಹನ ಚಾಲಕರು ವೃಂದಕ್ಕೆ ಮುಂಬಡ್ತಿ ಮತ್ತು ವಾಹನ ಚಾಲಕರು ವೃಂದದಿಂದ ದ್ವಿತಿಯ ದರ್ಜೆ ಸಹಾಯಕರು ವೃಂದಕ್ಕೆ ವೃಂದ ಬದಲಾವಣೆ ಆದೇಶ ಕ್ರಮವಾಗಿ ದಿನಾಂಕ:17.11.1992, 13.12.2002, 27.09.2010, 28.11.1990, 22.08.2000, 26.09.2008, 11.09.2013, 21.10.89, 10.11.2009, 19.11.2009, 26.06.2013 ಮತ್ತು 10.09.2015.

3. ವಾಹನ ಚಾಲಕರು ಹಾಗು ಹಿರಿಯ ವಾಹನ ಚಾಲಕರು ವೃಂದದ ನೌಕರರ ದಿನಾಂಕ 01.01.2006 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ನಿಮಮಇ/ಜೇಷ್ಠತೆ/ವಾಚಾ/22/06-07 ದಿನಾಂಕ: 11.05.2007.

4 ವಾಹನ ಚಾಲಕರು ಹಾಗು ಹಿರಿಯ ವಾಹನ ಚಾಲಕರು ವೃಂದದ ನೌಕರರ ದಿನಾಂಕ 01.01.2013 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ನಿಮಅಇ/ಜೇಷ್ಠತೆ/8/ವಾಚಾ/2013-14 ದಿನಾಂಕ: 26.09.2014.

5. ವಾಹನ ಚಾಲಕರು ಹಾಗು ಹಿರಿಯ ವಾಹನ ಚಾಲಕರು ವೃಂದದ ನೌಕರರ ದಿನಾಂಕ 01.01.2015 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ಮಮಅಇ/ಜೇಷ್ಠತೆ/ವಾಚಾ/20/2015-16 ದಿನಾಂಕ:01.08.2015.

6. ವಾಹನ ಚಾಲಕರು ಹಾಗು ಹಿರಿಯ ವಾಹನ ಚಾಲಕರು ವೃಂದದ ನೌಕರರ ದಿನಾಂಕ 01.01.2016 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ಮಮಅಇ/ಜೇಷ್ಠತೆ/ವಾಚಾ/14/2016-17 ದಿನಾಂಕ:29.09.2016.

ಪ್ರಸ್ತಾವನೆ: ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ 2368/2011 ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ:09.02.2017 ರಂದು ನೀಡಿರುವ ತೀರ್ಪಿನಲ್ಲಿ ರಾಜ್ಯ ಸರ್ಕಾರದ ನಾಗರೀಕ ಸೇವೆಗಳನ್ನು "Karnataka Determination of Seniority of Govt servants promoted on the basis of Reservation Act 2002" ರ ಸೆಕ್ಷನ್ 3 ಮತ್ತು 4ನ್ನು ಸಂವಿಧಾನದ ಅನುಚ್ಛೇಧ 14 ಮತ್ತು 16 ನ್ನು ಆಧಿಕಾರಾತೀತ (**ultra vires**) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ನೀಡಿರುವ ಮುಂಬಡ್ತಿಗಳಲ್ಲಿ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ನೌಕರರಿಗೆ ಮೀಸಲಾತಿ ಅನುಸರಿಸಿರುವ ಅಧಿಕಾರಿಗಳ/ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರ್‌ಪರಿಶೀಲಿಸಲು ಆದೇಶಿಸಲಾಗಿದೆ. ಅದರಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ಹೊರಡಿಸಲಾಗಿರುವ ಅಧಿಕಾರಿ/ನೌಕರರ ಜೇಷ್ಠತೆ ಪುನರ್ ಪರಿಶೀಲಿಸಿ, ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಬೇಕಿದೆ.